ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಇಲಾಖೆ / ವಿಷಯ: DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER : ವಿಜಯ ಕರ್ನಾಟಕ
ದಿನಾಂಕ : DATE : 17/05/201

# ಜ್ಯೇಷ್ಠತಾ ಪಟ್ಟಿ ಸಿದ್ಧತೆಯ ಗೊಂದಲ: ಮತ್ತೆ ಕಗ್ಗಂಟು ಸಾಧ್ಯತೆ

▪ ವಿಕ ಸುದ್ದಿಲೋಕ ಬೆಂಗಳೂರು

ಬಡ್ತಿ ಮೀಸಲು ಪ್ರಕರಣದಡಿ ಜ್ಯೇಷ್ಠತಾ ಪಟ್ಟಿ ತಯಾರಿಸುವಾಗ ಪ್ರಾರಂಭದಲ್ಲೇ ಗೊಂದಲಕಾರಿ ನಡೆ ಅನುಸರಿಸಿದ್ದರಿಂದ ಸುಪ್ರೀಂನ ಅಂತಿಮ ಆದೇಶದ ಬಳಿಕವೂ ಅನಿಶ್ಚಿತತೆ ಮುಂದುವರಿಯುವ ಲಕ್ಷಣ ಕಾಣಿಸಿದೆ.

ಬಿ.ಕೆ.ಪವಿತ್ರ ಪ್ರಕರಣದ ತೀರ್ಪಿನಿಂದ ಸಂಕಷ್ಟಕ್ಕೆ ಒಳಗಾದ ಪರಿಶಿಷ್ಟ ಅಧಿಕಾರಿಗಳು, ನೌಕರರ ಹಿತರಕ್ಷಣೆಗೆ ರಾಜ್ಯ ಸರಕಾರ ತಂದಿರುವ ಕಾಯಿದೆ ಜಾರಿಗೆ ಸುಪ್ರೀಂಕೋರ್ಟ್ ಕಳೆದ ವಾರ ಸಮ್ಮತಿಸಿದೆ. ಅದರ ಆಧಾರದಲ್ಲಿ ಕಾಯಿದೆ ಜಾರಿಗೆ ಡಿಪಿಎಆರ್‌ಗೆ ಸೂಚನೆ ನೀಡಲಾಗಿದೆ. 30 ದಿನದೊಳಗೆ ಈ ಪ್ರಕ್ರಿಯೆ ಪೂರ್ಣಗೊಳಿಸುವಂತೆಯೂ ನಿರ್ದೇಶನ ಕೊಡಲಾಗಿದೆ.

ಬಡ್ತಿ ವಿಚಾರದಲ್ಲಿ ಮುಖ್ಯ ಕಾರ್ಯದರ್ಶಿ ಅವರನ್ನು ಭೇಟಿಯಾಗಿದ್ದ ಎಸ್‌ಸಿ, ಎಸ್‌ಟಿ ನೌಕರರ ಸಂಘದ ಪ್ರತಿನಿಧಿಗಳು ಬಿ.ಕೆ.ಪವಿತ್ರ ಪ್ರಕರಣದ ತೀರ್ಪಿನ ಬಳಿಕ ಹಿಂಬಡ್ತಿಗೆ ಒಳಗಾಗಿರುವ 3,750 ಮಂದಿಗೆ ತಕ್ಷಣವೇ ಮೊದಲಿನ ಸ್ಥಾನ ನೀಡಬೇಕು. ತಡೆ ಹಿಡಿದ ಸೌಲಭ್ಯ ಕಲ್ಪಿಸಲು ಮನವಿ ಮಾಡಿದ್ದಾರೆ. ಮತ್ತೊಂದೆಡೆ ಸಾಮಾನ್ಯ ವರ್ಗದ ನೌಕರರ ಪ್ರತಿನಿಧಿಗಳು ಜ್ಯೇಷ್ಠತಾ ಪಟ್ಟಿ ಪರಿಷ್ಕರಣೆಯಲ್ಲಿನ ದೋಷಗಳ ಬಗ್ಗೆ ದೂರು ಸಲ್ಲಿಸಿದ್ದಾರೆ. ಇದು ಹೊಸ ಸಮಸ್ಯೆಯ ಮೂಲವಾಗಿದೆ.

1978ರಲ್ಲೇ ಬಡ್ತಿ ಮೀಸಲು ಸಂಘರ್ಷ ಪ್ರಾರಂಭವಾಗಿದೆ. 1995ರಲ್ಲಿ ಬಡಪ್ಪನವರ್ ಪ್ರಕರಣದಿಂದ ಇದು ತೀವ್ರ ಸ್ವರೂಪ ಪಡೆದುಕೊಂಡಿತ್ತು. ಬಳಿಕ ಎಂ. ನಾಗರಾಜ್ ಮತ್ತು ಬಿ.ಕೆ.ಪವಿತ್ರ ಪ್ರಕರಣದ ವರೆಗೂ ಹಿಗ್ಗಿದೆ. 2017ರ ಫೆಬ್ರವರಿಯಲ್ಲಿ ಪವಿತ್ರ ಪ್ರಕರಣದ ತೀರ್ಪು ಪ್ರಕಟವಾಗುತ್ತಿದ್ದಂತೆ ಪರಿಶಿಷ್ಟ ನೌಕರರ ಭವಿಷ್ಯ ಡೋಲಾಯಮಾನವಾಯಿತು. ನಂತರ ಹೊಸ ಜ್ಯೇಷ್ಠತಾ ಪಟ್ಟಿ ಸಿದ್ಧಪಡಿಸಿ ಪರಿಶಿಷ್ಟ ನೌಕರರಿಗೆ (3,750 ಮಂದಿ) ಹಿಂಬಡ್ತಿ ನೀಡಲಾಗಿದೆ. ಆದರೆ, ಜ್ಯೇಷ್ಠತಾ ಪಟ್ಟಿ ಸಿದ್ಧಗೊಳಿಸುವಾಗಲೂ ಸರಕಾರ ಎಡವಿದೆ. ಇಂಥ ಸೂಕ್ಷ್ಮ ಪ್ರಕರಣದ ಅರಿವಿಲ್ಲದ ನಿವೃತ್ತ ಅಧಿಕಾರಿಗಳ ಸಮಿತಿ ರಚಿಸಿ ಈ ಪ್ರಕ್ರಿಯೆ ನಡೆಸಲಾಗಿದೆ. ಸಚಿವಾಲಯದಲ್ಲಿ ಜಂಟಿ ಕಾರ್ಯದರ್ಶಿ, ಅಧೀನ ಕಾರ್ಯದರ್ಶಿಗಳಾಗಿ ನಿವೃತ್ತಿ ಹೊಂದಿರುವ ಇವರು ಬಡ್ತಿ ಹೊಂದಿದವರು (ಪ್ರಮೋಟಿಗಳು), ನೇರ ನೇಮಕ ಹಾಗೂ ಮೀಸಲಿನಡಿ ಬಡ್ತಿ ಪಡೆದ ವಿಭಾಗದವರನ್ನು ಸರಿಯಾಗಿ ಪರಿಗಣಿಸಲಿಲ್ಲವೆಂಬ ಆರೋಪ ಮೊದಲಿನಿಂದಲೂ ಇತ್ತು. ಅದು ಈಗ ಮತ್ತೆ ಮುನ್ನೆಲೆಗೆ ಬಂದಿದೆ.

## ಬಡ್ತಿ ಮೀಸಲು ಪ್ರಕರಣ

### ಆಕ್ಷೇಪಣೆಗೆ ನಿರ್ಲಕ್ಷ್ಯ

**ನಿವೃತ್ತ ಅಧಿಕಾರಿಗಳು ಜ್ಯೇಷ್ಠತಾ ಪಟ್ಟಿ ಪರಿಷ್ಕರಿಸುವಾಗ 1 ಸಾವಿರಕ್ಕೂ ಹೆಚ್ಚು ಆಕ್ಷೇಪಣೆ ಬಂದಿದ್ದವು. ಆದರೆ, ಈ ಯಾವುದನ್ನೂ ಸಮಿತಿ ಗಣನೆಗೆ ತೆಗೆದುಕೊಳ್ಳಲಿಲ್ಲ, ಇದರಿಂದಾಗಿ ನ್ಯಾಯಾಂಗ ಹೋರಾಟದ ಸಂದರ್ಭದಲ್ಲೂ ರಾಜ್ಯ ಸರಕಾರಕ್ಕೆ ಇರಿಸುಮುರಿಸಿನ ಅನುಭವವಾಗಿತ್ತು. ಈ ಹಂತದಲ್ಲಿ ಜ್ಯೇಷ್ಠತಾ ಪಟ್ಟಿಯನ್ನು ಪುನಃ ಕೆದಕಲು ಹೋದರೆ ಅಪಾಯ ನಿಶ್ಚಿತ ಎಂದು ತಜ್ಞರು ಹೇಳುತ್ತಾರೆ.**